

ಹುಕ್ಕಾ ಸೇವನೆ: ಗೊಂಬೆ ಮ್ಯೂಸಿಯಂನಲ್ಲಿರುವ ಈ ನೋಟ ಅದೆಷ್ಟು ಸುಂದರ!

## ಆ ರಹಸ್ಯ ಹೊರಜಗತ್ತಿಗೆ ಗೊತ್ತಾಗುವ ಸಮಯವೂ ಬಂತು!

1975ರಲ್ಲಿ ಒಂದು ಬೆಳಿಗ್ಗೆ ಯಾವುದೋ ಕೆಲಸಕ್ಕೆಂದು ಅರಣ್ಯದೊಳಗೆ ತೆರಳಿದ್ದ ಅಧಿಕಾರಿಗಳಿಗೆ ಬೆರಗಿನ ಲೋಕವೊಂದು ಧುತ್ತನೇ ಪ್ರತ್ಯಕ್ಷವಾಯಿತು. ಗರಬಡಿದವರಂತೆ ಆ ಲೋಕವನ್ನು ಅವರು ಮತ್ತೆ ಮತ್ತೆ ಸುತ್ತಿದರು. ಕಾಡಿನಲ್ಲೇನೋ ನಡೆದಿದೆ ಎಂದು ಮೇಲಧಿಕಾರಿಗಳಿಗೆ ವರದಿ ನೀಡಿದರು. ಅವರು ಸಹ ಖುದ್ದಾಗಿ ಭೇಟಿ ನೀಡಿ, ಬಣ್ಣದ ಲೋಕವನ್ನು ಪರಿಶೀಲಿಸಿದರು.

ಆ ಹೊತ್ತಿಗೆ ನೆಕ್ ಚಾಂದ್ ರೂಪಿಸಿದ್ದ ಗೊಂಬೆಗಳ ಲೋಕದ ವಿಸ್ತಾರ 12 ಎಕರೆಗೆ ವ್ಯಾಪಿಸಿತ್ತು. ವರ್ಣರಂಜಿತ ಗೊಂಬೆಗಳೂ, ಗುಹೆಗಳಂಥ ರಚನೆಗಳೂ, ಅಲ್ಲಲ್ಲಿ ರಂಗಮಂಟಪಗಳೂ ಇದ್ದ ದೃಶ್ಯ ಮೋಹಕವಾಗಿತ್ತು. ಆದರೆ ನಿರ್ಬಂಧಿತ ಪ್ರದೇಶದಲ್ಲಿ ಸ್ಥಾಪನೆಯಾದ ಆ ಪಾರ್ಕ್ ಕಾನೂನುಪ್ರಕಾರ 'ಅಕ್ರಮ'ವಾಗಿತ್ತು. ಕಾನೂನುಪಾಲಿಸಲು ಮುಂದಾದ ಅಧಿಕಾರಿಗಳು, ಅದನ್ನು ತೆರವುಗೊಳಿಸಲು ನಿರ್ಧರಿಸಿದರು.

ಸುದ್ದಿತಿಳಿದ ನೆಕ್ ಚಾಂದ್ ಆತಂಕಕ್ಕೆ ಈಡಾದರು. ವರ್ಷಗಳ ಕಾಲ ಜತನದಿಂದ ರೂಪಿಸಿದ್ದ ಅಪರೂಪದ ಪಾರ್ಕ್, ತೆರವಾಗುವ ಸಮಯ ಸನ್ನಿಹಿತವಾಗಿತ್ತು. ಅದನ್ನು ಶತಾಯಗತಾಯ ಉಳಿಸಿಕೊಳ್ಳಲು ಪಣತೊಟ್ಟರು. ಉದ್ಯಾನದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಿ, 'ಇಂಥದೊಂದು ವರ್ಣರಂಜಿತ ಲೋಕ ನಿಮ್ಮ ಪಟ್ಟಣದ ಪಕ್ಕದಲ್ಲೇ ಇದೆ. ಅದನ್ನು ಉಳಿಸಿಕೊಳ್ಳುವುದು ಸಹ ನಿಮ್ಮ ಕೈಯಲ್ಲೇ ಇದೆ' ಎಂದು ಕರೆ ನೀಡಿದರು.

ಯಾರ ಅರಿವಿಗೂ ಬಾರದಂತೆ ವ್ಯರ್ಥ ಪದಾರ್ಥಗಳನ್ನು ಬಳಸಿ ಸೊಬಗಿನ ಲೋಕ ಒಂದನ್ನು ಸೃಷ್ಟಿಸಿದ್ದ ನೆಕ್ ಚಾಂದ್ ಅವರ ಶ್ರಮ ಅರಿವಿಗೆ ಬರುತ್ತಿದ್ದಂತೆ, ಅಧಿಕಾರಿಗಳ ನಿರ್ಧಾರದ ವಿರುದ್ಧ ಜನ ಸಿಡಿದೆದ್ದರು. ಜನರ ಪ್ರತಿರೋಧದಿಂದಾಗಿ ಅಧಿಕಾರಿಗಳು, ರಾಕ್ ಗಾರ್ಡನ್ ತೆರವು ಮಾಡುವ ನಿರ್ಧಾರದಿಂದ ಹಿಂದಕ್ಕೆ ಸರಿದರು. ಅಷ್ಟೇ ಅಲ್ಲ; ಉದ್ಯಾನವನ್ನು 1976ರಲ್ಲಿ ಸಾರ್ವಜನಿಕರಿಗೆ ಮುಕ್ತಗೊಳಿಸಲಾಯಿತು ಹಾಗೂ ನೆಕ್ ಚಾಂದ್ ಅವರನ್ನು ಸಬ್ ಡಿವಿಜನಲ್ ಎಂಜಿನಿಯರ್ ಹುದ್ದೆಗೆ ನಿಯುಕ್ತಗೊಳಿಸಿ, 50 ಸಿಬ್ಬಂದಿಯನ್ನು ಒದಗಿಸಿ ಮೇಲುಸ್ತುವಾರಿಯ ಹೊಣೆ ವಹಿಸಲಾಯಿತು. ಅದಕ್ಕೆ 'ರಾಕ್ ಗಾರ್ಡನ್' ಎಂದು ಹೆಸರಿಡಲಾಯಿತು.

## ಏನೇನಿದೆ ಶಿಲೋದ್ಯಾನದಲ್ಲಿ?

ಸುಮಾರು 40 ಎಕರೆ ಪ್ರದೇಶದಲ್ಲಿ ವ್ಯಾಪಿಸಿಕೊಂಡಿರುವ 'ರಾಕ್ ಗಾರ್ಡನ್'ನಲ್ಲಿ, ಸಾವಿರಾರು ಕಲಾಕೃತಿಗಳಿವೆ. ಕೈಗಾರಿಕೆ, ಗೃಹ ತ್ಯಾಜ್ಯ ಹಾಗೂ ಬಳಸಿ ಬಿಸಾಡಿದ ಹಲವಾರು ಪದಾರ್ಥಗಳಿಂದ ಈ ಕಲಾಕೃತಿಗಳನ್ನು ರಚಿಸಲಾಗಿದೆ. ಅಂದಹಾಗೆ, ಈ ತ್ಯಾಜ್ಯಗಳಾದರೂ ಯಾವುವು ಗೊತ್ತೇ?

ಟೈಲ್ಸ್, ಗಾಜಿನ ತುಂಡು, ಬಾಟಲಿ, ಬಳೆ, ಸಿರಾಮಿಕ್ ಪಾತ್ರೆ, ಪೋರ್ಸಲೀನ್ ಸಿಂಕ್, ವಿದ್ಯುತ್ ಸಾಮಗ್ರಿಗಳು, ಮುರಿದ ಪೈಪುಗಳು, ಹಳೆಯ ಬಟ್ಟೆ, ಇತ್ಯಾದಿ ಇತ್ಯಾದಿ..!


ಮೂವತ್ತು ರೂಪಾಯಿ ಪ್ರವೇಶ ದರ ತೆತ್ತು, ಒಳಪ್ರವೇಶಿಸುತ್ತಲೇ ಎದುರಾಗುತ್ತದೆ 'ಕಿಂಗ್‌ಡಮ್ ಆಫ್ ಗಾಡ್ಸ್' ಆವರಣ. ತರಹೇವಾರಿ ದೇವತೆಗಳ ವಿಗ್ರಹಗಳು ಅಲ್ಲಿವೆ. ಅವುಗಳ ರಚನೆಯಲ್ಲಿ ಪ್ರಮುಖ ವಸ್ತು ಬಳಕೆಯಾಗಿರುವುದು ಸೈಕಲ್‌ನ ಮಡ್‌ಗಾರ್ಡ್! ದೇವತೆಗಳ ಆಸುಪಾಸು ಹೂಕುಂಡಗಳು ಇದ್ದು, ಸೈಕಲ್ ಗಾಲಿಗಳಿಗೆ ಅಕ್ಕಪಕ್ಕ ಆಸರೆ ನೀಡುವ ('ವೈ' ಆಕಾರದ) ಕಬ್ಬಿಣದ ಸಲಾಕೆಗಳನ್ನು ಬಳಸಲಾಗಿದೆ.

ಮುರಿದ ಟೈಲ್ಸ್‌ನ ಲಕ್ಷಾಂತರ ತುಣುಕುಗಳು

## ಮೊದಲ ಹೆಜ್ಜೆಯ ಅಚ್ಚಳಿಯದ ನೆನಪು

ಪ್ರವೇಶ ದ್ವಾರದ ಅನತಿ ದೂರದಲ್ಲಿ ಗುಡಿಸಲೊಂದಿದೆ. ಮೇಲ್ನೋಟಕ್ಕೆ ಅದು ಸಾದಾ ಗುಡಿಸಲು. ಆದರೆ ಉದ್ಯಾನದ ಆರಂಭ ಆಗಿದ್ದು ಅಲ್ಲಿಂದಲೇ.

ನೆಕ್ ಚಾಂದ್ ತಮ್ಮ ಕಲ್ಪನೆಯನ್ನು ಸಾಕಾರ ರೂಪಕ್ಕೆ ತರುವ ಕೆಲಸಕ್ಕೆ ತರಲು ಸ್ಫೂರ್ತಿ ನೀಡಿದ್ದು ಆ ಗುಡಿಸಲು. ಬಹುತೇಕ ಹಾಳಾಗಿದ್ದ ಆ ಗುಡಿಸಲಿನ ಮೂಲೆಯಲ್ಲಿ ಬೀಸುವ ಕಲ್ಲು ಅನಾಥವಾಗಿ ಬಿದ್ದಿತ್ತು. ಅದನ್ನು ಜೋಪಾನವಾಗಿ ಎತ್ತಿಟ್ಟು, ಬಳಿಕ ಗುಡಿಸಲನ್ನು ದುರಸ್ತಿ ಮಾಡಿದರು. ಆಮೇಲೆ ರಹಸ್ಯವಾಗಿ ಅಲ್ಲಿಗೆ ಕಚ್ಚಾ ಪದಾರ್ಥಗಳನ್ನು ಹೊತ್ತು ತಂದು, ಜೋಡಿಸುವ ಸಮಯದಲ್ಲಿ ಅದೇ ಗುಡಿಸಲಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. 'ಕಸದಿಂದ ರಸ' ರೂಪಿಸುವ ಚಾಂದ್ ಅವರ ಮಹತ್ವಾಕಾಂಕ್ಷೆಯ ಮೊದಲ ಹೆಜ್ಜೆ ತಾಣ ಆ ಗುಡಿಸಲು. ಅದನ್ನು ಈಗಲೂ ಜತನದಿಂದ ಕಾಯ್ದುಕೊಂಡಿರುವುದು ಸಂತಸದ ಸಂಗತಿ.



ನೆಕ್ ಚಾಂದ್ ರೂಪಿಸಿದ ಪಾರ್ಕ್ ತೆರವಿಗೆ ಸರ್ಕಾರ ಮುಂದಾದಾಗ, ಸ್ಥಳೀಯರು ಅದರ ವಿರುದ್ಧ ನಡೆಸಿದ ಪ್ರತಿಭಟನೆ (ಕೃಪೆ: ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕಾ ವರದಿ)